Juni Khyat(जूनी ख्यात) ISSN: 2278-4632
(UGC CARE Group I Listed Journal) Vol-15, Issue-01, No.01, January: 2025

# ಕರ್ನಾಟಕದ ಪರಿಶಿಷ್ಟ ಪಂಗಡಗಳ ರಾಜಕೀಯ ಬೆಳವಣಿಗೆ ಮತ್ತು ನಾಯಕತ್ವ

**ಆನಂದ ಅಬ್ಬನಾರ್** ಸಂಶೋಧನಾ ವಿದ್ಯಾರ್ಥಿ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ. 577007

**ಡಾ. ಬಸವರಾಜ ಬೆನಕನಹಳ್ಳಿ** ಮಾರ್ಗದರ್ಶಕರು / ಸಹಾಯಕ ಪ್ರಾಧ್ಯಾಪಕರು ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ. 577007

## ಪೀಠಿಕೆ

ಒಂದು ಸಮುದಾಯ ಅಭಿವೃದ್ಧಿ ಪಥದಲ್ಲಿ ಸಾಗಬೇಕದಾರೆ ಅಲ್ಲಿನ ರಾಜಕೀಯ ಆಡಳಿತವು ಬಹುಮುಖ್ಯ ಪಾತ್ರವಹಿಸುತ್ತದೆ.ಇಂದು ಭಾರತವು ವಿಶ್ವದಲ್ಲೆ ಅತಿ ಹೆಚ್ಚು ಸಂಸದೀಯಪ್ರಜಾಪ್ರಭುತ್ವ ಎಂಬ ಹೆಗ್ಗಳಿಕಗೆ ಪಾತ್ರವಾಗಿದೆ. ಸಂಸದೀಯ ಸರ್ಕಾರವನ್ನು ರಚಿಸಿಕೊಂಡು ಇದರಲ್ಲಿ ಸಂಸತ್, ಶಾಸಕಾಂಗ, ಕಾರ್ಯಯಾಂಗ,ಸರ್ವೋಚ್ಚ ನ್ಯಾಯಲಯಗಳು, ಅಗಾದವಾದ ಅಡಳಿತವನ್ನು ಹೊಂದಿದೆ. ಎಲ್ಲಾರಿಗೂ ತಿಳಿದಿರುವಂತೆ ಕಾರ್ಯಂಗದ ಕಾರ್ಯನಿರ್ಹಹಣೆ ಮತ್ತು ಮೇಲ್ವಾಚರಣೆ ಮಾಡುವ ಆಧಿಕಾರವನ್ನು ನಮ್ಮ ಸಂವಿಧಾನಕ್ಕಿದೆ, ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ತತ್ವದ ಮೂಲಕ ರಾಷ್ಟ್ರೀಯ ಹಿತಾಶಕ್ತಿಯನು ಎತ್ತಿಯಿಡಲು ಮತ್ತು ಪೂರೈಸಲು ಸಂಸತ್ ತನ್ನಅಧಿಕಾರವನ್ನು ರಾಷ್ಟ್ರೀಯ ಅಭಿವೃದ್ಧಿ, ಅದಿವಾಸಿಗಳ ಉನ್ನತಿ, ಪರಿಶಿಷ್ಟಪ್ರದೇಶಗಳ ಅಭಿವೃದ್ಧಿ, ಬುಡಕಟ್ಟು ಆರಣ್ಯವಾಸಿಗಳ ಪುನರ್ವಸತಿ, ಅನೇಕ ಸಂವಿಧಾನಿಕ ನಿಬಂಧನೆಗಳನ್ನು ಅಳವಡಿಸಿಕೊಂಡು ಯಾವುದೇ ಧರ್ಮ, ಜಾತಿ, ಲಿಂಗ, ತಾರತಮ್ಯ ಮಾಡದೆ ಸಾಮಾಜಿಕ ನ್ಯಾಯದಡಿಯಲ್ಲಿಯುಸರ್ವಜನಿಕ ಉದ್ಯೋಗ ವಿಷಯದಲ್ಲಿ ಸಮಾನ ಅವಕಾಶಗಳು ಹಾಗೂ ಹಿಂದುಳಿದ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿ ಹಾಗೂ ಮೀಸಲಾತಿ ಅಧ್ಯತೆ ನೀಡಿ ನಂತರದಲ್ಲಿ ಕರ್ನಾಟಕದ ಪರಿಶಿಷ್ಟ ಪಂಗಡದ ರಾಜಕೀಯ ಆಸ್ಮೀತೆಯನ್ನು ಗಮಿಸಿದಾಗ ಜಾತಿ ಆಧಾರಿತ ರಾಜಕಾರಣ ಗೋಚರಿಸುತ್ತದೆ, ಅದುದರಿಂದ ಮೀಸಲಾತಿ ರಾಜಕಾರಣ ಜಾರಿಗೆ ತಂದು ವಿಧಾನಸಭೆ, ಲೋಕಸಭೆ ಸ್ಥಳೀಯ ಸರ್ಕಾರ ಪುರಸಭೆಗಳಲ್ಲಿ ಪರಿಶಿಷ್ಟ ಪಂಗಡಗಳು ರಾಜಕೀಯ ಭಾಗವಹಿಸುವ ಪ್ರಕ್ರಿಯೆ ಪ್ರಾರಂಭವಾಯಿತು.

## ಪರಿಶಿಷ್ಟ ಪಂಗಡ ಜನಾಂಗದ ಪರಿಕಲ್ಪನೆಗಳು

ಬುಡಕಟ್ಟು ಎಂಬ ಪದವು ಗ್ರೀಕ್ ನಗರ ರಾಜ್ಯಗಳ ಸಮಯದಲ್ಲಿ ಮತ್ತು ರೋಮನ್ ಸಾಮ್ರಾಜ್ಯದ ಆರಂಭಿಕ ರಚನೆಯ ಸಮಯದಲ್ಲಿ ಹುಟ್ಟಿಕೊಂಡಿತು. ಬುಡಕಟ್ಟು ಎಂಬ ಪದವು ಒಂದು ಸಮುದಾಯವನ್ನು ರೂಪಿಸುವ ಮತ್ತು ಸಾಮಾನ್ಯಪೂರ್ವಜರ ವಂಶಸ್ಥರೆಂದು ಹೇಳಿಕೋಳ್ಳುವ ವ್ಯಕ್ತಿಗಳ ಗುಂಪು ಎಂಬ ಆರ್ಥವನ್ನು ನೀಡುವ ಪದದಿಂದ ಬಂದಿದೆ. ಮಾನವನ ಗುಂಪು, ಎಂದು ಪರಿಗಣಿಸಲು ಯಾವುದೇ ನಿಖರವಾದ ವ್ಯಾಖ್ಯಾನ ಆಥಾವ ಮಾನದಂಡಗಳಿಲ್ಲ. ಅದಾಗೂ ವಿದ್ಯಾಂಸರು ಇದನ್ನು ವಿವಿಧ ಸಮಯಗಳಲ್ಲಿ ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಬುಡಕಟ್ಟು ಪರಿಕಲ್ಪನೆ ಮತ್ತು ವ್ಯಾಖ್ಯಾನಕ್ಕೆ ಸಂಬಂಧಸಿದಂತೆ ಅಸ್ಪಷ್ಟತೆ ಇದೆ. ಕೆಲವೊಮ್ಮೆ ಅವರನ್ನು ಮೂಲ ನಿವಾಸಿಗಳು ಅಥಾವ ಆದಿವಾಸಿಗಳು ಎಂದು ಕರೆಯುತ್ತಾರೆ. ಬುಡಕಟ್ಟು ಎಂಬ ಪದದ ಅರ್ಥವು ಸಾಮಾನ್ಯವಾಗಿ ಗುಡ್ಡಗಾಡುಗಳಲ್ಲಿ ಕಂಡುಬರುವ ಆನಾಗರಿಕತೆಯಿಂದ ಹಿಂದುಳಿದ ಜನಸಮುದಾವನ್ನು ಒಳಗೊಂಡಂತೆ ಸಾಮಾಜಿಕ ಜೀವನವನ್ನು ರೂಪಿಸಿಕೊಂಡು ತಮ್ಮದೇಯಾದ ಕಾನೂನು ಮತ್ತು ಅಚಾರ ವಿಚಾರ ಒಂದು ಗುಂಪನ್ನು ಹಾಗೂ ಅಭಿವೃದ್ಧಿಯ ಪ್ರಾಚೀನ ಅಥಾವ ಆನಾಗರಿಕ ಹಂತದಲ್ಲಿರುವ ಜನರ ಗುಂಪಾಗಿದ್ದು, ಒಬ್ಬ ಮುಖ್ಯಸ್ಥನ ಆಧಿಕಾರವನ್ನು ಒಪ್ಪಿಕೊಳ್ಳುತ್ತದೆ ಮತ್ತು ಸಾಮಾನ್ಯವಾಗಿ ಅವರನ್ನು ಸಾಮಾನ್ಯ ಪೂರ್ವಜರನ್ನು ಹೊಂದಿರುವರು ಎಂದು ಪರಿಗಣಿಸುತ್ತದ್ದೆ. ಇಂಪಿರಿಯಲ್ ಗೆಜೆಟಿಯರ್ ಆಫ್ ಇಂಡಿಯಾ ಪ್ರಾಕಾರ ಬುಡಕಟ್ಟು ಒಂದು ಸಾಮಾನ್ಯ ಹೆಸರನ್ನು ಹೊಂದಿರುವ ಕುಟುಂಬಗಳ ಸಂಗ್ರಹವಾಗಿದೆ, ಸಾಮಾನ್ಯ ಉಪ ಭಾಷೆಯನ್ನು ಮಾತನಾಡುತ್ತಾರೆ. ಸಾಮಾನ್ಯವಾಗಿ ಒಂದೇ ಪ್ರಾದೇಶವನ್ನು ಆಕ್ರಮಿಸಿಕೊಂಡು ಎ ಕುಮಾರ್ ರವರ ಪ್ರಕಾರ ಬುಡಕಟ್ಟು ಎಂದರೇ ಅಕ್ಕ ಪಕ್ಕದ ಪ್ರದೇಶಳನ್ನು ಅಕ್ರಮಿಸಿಕೊಂಡು ಗುಂಪು ಗುಂಪಾಗಿ ಅಗಾಗ್ಗೆ ಸಂಪರ್ಕ ಸಂಸ್ಕೃತಿಯಲ್ಲಿನ ಹಲವಾರು ನಾಮ್ಯತೆಗಳಿಂದ ಮತ್ತು ಆಸಕ್ತಿಯ ನಿರ್ದಿಷ್ಟ ಸಮುದಾಯದಿಂದ ಪಡೆದ ಐಕ್ಯತಿಯ ಭಾವನೆಯನ್ನು


Copyright @ 2025 Author

ಪಡೆದಿರುತ್ತಾರೆಡಿ.ಎನ್. ಮಜುಂದಾರ್ ಪ್ರಕಾರ ಬುಡಕಟ್ಟು ಜನಾಂಗವು ಒಂದು ಪ್ರಾದೇಶಿಕ ಸಂಬಂಧ, ಅಂತರ್ವಿವಾಹ, ಯಾವುದೇ ಕಾರ್ಯಗಳಲ್ಲಿನ ಬುಡಕಟ್ಟು ಪ್ರತಿನಿಧಿಗಳಿಂದ ಅಳಲ್ಪಡುವ ವಂಶಪಾರಂಪರ್ಯವಾಗಿ ಅಥಾವ ಬೇರೆ ರೀತಿಯಲ್ಲಿ ಭಾಷೆ, ಉಪಭಾಷೆ, ಒಗ್ಗೂಡಿದ ಮತ್ತು ಕಾಡಿಗಿಚ್ಚಿನಿಂದ ಬಂದ ಸಮುದಾಯವಾಗಿದೆ ನಾಯ್ಕ ರವರ ಪ್ರಕಾರ ಬುಡಕಟ್ಟು ಎನ್ನುವ ಪದದ ಕುರಿತು ಮಾನವಶಾಸ್ತ್ರಜ್ಞರಲ್ಲಿ ಸಾಕಷ್ಟು ಚರ್ಚೆಗಳಾಗಿದ್ದಾರು ಸಹ ಇಲ್ಲಿವರೆಗೂ ಅವರ ಕುರಿತು ಸಾಮಾನ್ಯವಾಗಿ ಒಪ್ಪಿಕೊಳ್ಳುವಂತ ವ್ಯಾಖ್ಯಾನವೊಂದು ಮೂಡಿ ಬಂದಿಲ್ಲ ಇದು ಬಗೆಹರಿಸಾಲಂದತಹ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಬಹಳ ಮುಖ್ಯಾವಾಗಿ ಅರ್ಥಮಾಡಿಕೊಳ್ಳುವುದೆನೆಂದರೆ, ಪರಿಶಿಷ್ಟ ಪಂಗಡಗಳು ಆಡಳಿತ್ಮಾಕ ಗುರುತುಗಳೆ ಹೊರೆತು ಸಾಮಗಿಕ ವಾಸ್ತವಕ್ಕೆ ಸಂಭಂದಿದವರಲ್ಲ. ವಸಹಾತುಶಾಹಿಯು ಭಾರತಕ್ಕೆ ಸ್ವಂತ ಸರ್ಕಾರದ ಜವಬ್ದಾರಿಯನ್ನು ನೀಡುವ ಸಂದರ್ಭದಲ್ಲಿ ರಾಜಕೀಯ ಸುಧಾರಣೆಯ ಪ್ರಕ್ರಿಯೆ ನಡೆಯುವಾಗ ಹುಟ್ಟಿಕೊಂಡವರು ಮಾರ್ಲೆಮೀಂಟೊ ಸುಧಾರಣ ವರದಿ, ಮೊಣಟೆಗು-ಚೆಮ್ಸಪೋರ್ಡ್ ಮತ್ತು ಸೈಮಾನ್ ಕಮೀಷನ್ ವರದಿ ಮುಂತಾದ ಕೆಲವು ಕ್ರಮಗಳು ಬುಡಕಟ್ಟು ಎನ್ನುವುದು ವಿಶ್ವಾತ್ಮಕವಾದ ಸಂಗತಿಯಾಗಿದ್ದು ಇಲ್ಲಿ ನಾಗರಿಕ ಮತ್ತು ಅನಾಗರಿಕ, ಬುಡಕಟ್ಟು ಮತ್ತು ಬುಡಕಟ್ಟೇತರ ವಿಭಾಗಗಳು ಉಂಟಾದವು.

**ಮಧ್ಯಕಾಲೀನ ರಾಜಕೀಯದಲ್ಲಿ ಪರಿಶಿಷ್ಟ ಪಂಗಡಗಳು**

ಭಾರತದ ರಾಜಕೀಯ ಸ್ವಾತಂತ್ರ್ಯದ ಪೂರ್ವ ಕಾಲಘಟ್ಟದಲ್ಲಿ ಭಾರತದ್ಯಂತ ೭೦೦ ಕ್ಕೂ ಹೆಚ್ಚು ಸಂಸ್ಥಾನಗಳ ಆಳ್ವಿಕೆಯಲ್ಲಿ ತನ್ನ ರಾಜಕೀಯ ಮತ್ತು ಆಡಳಿತಾತ್ಮಕ ಕಾರ್ಯ ವೈಖರಿಯೊಂದಿಗೆ ಅನೇಕ ಅರಸು ಮನೆತನಗಳು ರಾಜಮನೆತನಗಳು, ಪಾಳೇಗಾರರು, ವೀರ ಸಾಹಸಿಗಳಾಗಿ, ರಾಜರಾಗಿ ತಮ್ಮ ಪ್ರಭುತ್ವವನ್ನು ವಿಸ್ತರಿಸಿ ತಮ್ಮ ಪ್ರಜೆಗಳ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ, ಈ ದಿಸೆಯಲ್ಲಿ ಕರ್ನಾಟಕವು ತನ್ನ ರಾಜಕೀಯ ಇತಿಹಾಸದಲ್ಲಿ ರಾಜರು, ಅರಸರು ಹಾಗೂ ಕೋಟೆ ಕೊತ್ತಲಗಳನ್ನು ಕಟ್ಟಿದ ಪಾಳೇಗಾರರ ನಾಯಕ ಅರಸು ಮನೆತನಗಳ ಆಳ್ವಿಕೆಯನ್ನು ಒಳಗೊಂಡಿದೆ, ಎನ್ನುವುದನ್ನು ಅವರ ಐತಿಹಾಸಿಕ ರಾಜಕೀಯ ಹಿನ್ನಲೆಯಿಂದ ತಿಳಿದುಬರುತ್ತದೆ. ಇಂತಹ ಸಣ್ಣಪುಟ್ಟ ಮನೆತನಗಳಲ್ಲಿ ಕರ್ನಾಟಕ ನಾಯಕ ಪಾಳೇಗಾರರು ಪ್ರಮುಖರಾಗಿದ್ದಾರೆ, ಆಧುನಿಕ ಕರ್ನಾಟಕದ ಸಮಗ್ರ ರಾಜಕೀಯ ಇತಿಹಾಸವನ್ನು ರಚಿಸುವಲ್ಲಿ ಪಾಳೆಯಗಾರರು ಬಹುಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ೫-೬ ನೇ ಶತಮಾನದಲ್ಲೆ ಕರ್ನಾಟಕದಲ್ಲಿ ಪಾಳೇಯಗಾರರು ಮತ್ತು ನಾಯಕ ಅರಸರು ಸ್ಥಳಿಯ ರಾಜರುಗಳ ಸೈನಿಕರಾಗಿ ವಿಜಯನಗರ ಪೂರ್ವದಲ್ಲಿಯೇ ಇವರು ಸ್ವತಂತ್ರ ರಾಜ್ಯಸ್ಥಾಪನೆ ಮಾಡಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ-ಆನೆಗೊಂಡಿ ಮತ್ತು ಗೋರಂಟ್ಲಸಮ್ಮತ್ತು ಅಥವಾ ಗುಮ್ಮನಾಯಕನ ಪಾಳ್ಯ ಮತ್ತು ಕಂಪಿಲರಾಯ ಮತ್ತು ಗಂಡುಗಲಿ ಕುಮಾರರಾಮರು ಸುಪ್ರಸಿದ್ದರು. ವಿಜಯನಗರ ಸಮ್ರಾಜ್ಯದ ಕಾಲದಲ್ಲಿ ಅಂದರೆ ವಿಜಯನಗರದ ಸಂಸ್ಥಾಪಕರುಗಳು ಕಂಪಿಲ ಕುಮಾರರಾಮನ ಅಕ್ಕನ ಮಕ್ಕಳಾದ ಹಕ್ಕ-ಬುಕ್ಕರೇ ಆಗಿದ್ದು, ಇವರ ಮುತ್ತಾತನಾದ ಮುಮ್ಮಡಿ ಸಿಂಗಯ್ಯ ನಾಯಕನು ವಿಜಯನಗರ ಪೂರ್ವದಲ್ಲಿಯೇ ದೇವಗಿರಿ ಅರಸನಾದ ೧೨೫ ರಾಮದೇವರಾಯನ ಸೇನಾಪತಿಯಾಗಿದ್ದು ದಕ್ಷಿಣ ಭಾರತದಲ್ಲಿ ಪ್ರಬಲಶಕ್ತಿಯಾಗಿ ಹೊರಹೊಮ್ಮಿದ ವಿಜಯನಗರಸಾಮ್ರಾಜ್ಯದ ಕೀರ್ತಿಪ್ರಭೆ ಹರಡಲು ಕಾರಣರಾದವರು ಅದರ ಅಧೀನದಲ್ಲದ್ದ ನೂರಾರು ನಾಯಕ ಪಾಳೆಯಗಾರರು. ವಿಜಯನಗರವೆಂಬ ಜ್ಯೋತಿಗೆ ತೈಲವಾದರು. ಸಾಮ್ರಾಟರ ಪರವಾಗಿ ಸಮರ್ಥ ಯೋಧರಾಗಿ, ನಿಷ್ಠಾವಂತ ಪ್ರಾಂತಾಧಿಕಾರಿಗಳಾಗಿ ಸೇವೆ ಸಲ್ಲಿಸಿದವರು. ನಾಯಕರ ವ್ಯವಸ್ಥೆಯಾಚೆಗಿನ ವಿಜಯನಗರದ ಅಸ್ತಿತ್ವವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ವಿಜಯನಗರ ದೇಹವಾಗಿದ್ದರೆ ಅದರ ಪ್ರಾಣದಂತಿದ್ದವರು ನಾಯಕ ಪಾಳೆಯಗಾರರು. ಸಾಮಂತ, ನಾಯಕ, ಪಾಳೆಯಗಾರ, ದಂಡನಾಯಕ, ಮಂಡಲೇಶ್ವರ, ರಾಜ, ಮಹಾರಾಜ, ಅರಸ, ಒಡೆಯ, ದೊರೆ ಇತ್ಯಾದಿಯಾಗಿ ಕರೆಸಿಕೊಳ್ಳುತ್ತಿದ್ದವರೆಲ್ಲರೂ ನಾಯಕ ಪಾಳೆಯಗಾರರೇ. ಸಮಕಾಲೀನ ನಾಯಕ ಪಾಳೆಯಗಾರರ ಸಂಖ್ಯೆ ೨೫೦ ರಿಂದ ೩೦೦ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿಯೇ ಒಂದು ನೂರಕ್ಕು ಹೆಚ್ಚು ನಾಯಕ ಪಾಳೆಯಗಾರರಿದ್ದರು. ಭಾರತದ ಮಧ್ಯಕಾಲೀನ ಚರಿತ್ರೆಯಲ್ಲಿ ಮುಖ್ಯವಾಗಿ ದಖನ್ ರಾಜಕೀಯ ಬೆಳವಣಿಗೆಗಳಲ್ಲಿ ನಾಯಕರು ಅಥವಾ ಪಾಳೆಯಗಾರರು ನಿರ್ವಹಿಸಿದ ಪಾತ್ರ ಗಮನೀಯವಾದುದೆನ್ನಲು

 Copyright @ 2025 Author

ನಾಯಕ ಪಾಳೆಯಗಾರರು ಪ್ರಜಾಹಿತಕ್ಕೆ ನೀಡಿದ ಕಾಣಿಕೆ ಅವಿಸ್ಮರಣೀಯ. ೧೬ನೇ ಶತಮಾನದ ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಏಳಿಗೆಗೆ ಬಂದ ಚಿತ್ರದುರ್ಗದ ಪಾಳೆಯಗಾರರು ಸುಮಾರು೨೧೧ ವರ್ಷಗಳ ಕಾಲ ಆಳಿದರು. ಆರಂಭದಲ್ಲಿ ವಿಜಯನಗರದ ಅಮರ ನಾಯಕರಾಗಿಯೂ ೧೫೬೫ ರ ನಂತರ ಸ್ವತಂತ್ರರಾಗಿಯೂ ರಾಜ್ಯಭಾರ ಮಾಡಿದರು. ಬೇಡ ಕುಲಕ್ಕೆ ಸೇರಿದ್ದ ಈ ನಾಯಕರು ಅತ್ಯಂತ ಧೈರ್ಯ ಸಾಹಸಿಗಳಾಗಿಯೂ ಈ ಮನೆತನದ ಪಾಳೆಯಗಾರರು ಕಾಮಗೇತಿ, ಕಸ್ತೂರಿ, ಮದಕರಿ ಮಹಾ ನಾಯಕ ಮೊದಲಾದ ಬಿರುದುಗಳನ್ನು ಧರಿಸುತ್ತಿದ್ದರು. ಜಾತಿಯಲ್ಲಿ ಅವರು ಬೇಡರು, ವಾಲ್ಮೀಕಿ ಗೋತ್ರದವರು ೧೪ ನಾಯಕರು ಆಳಿದರು. ಅವರಲ್ಲಿ ಮತ್ತಿ ತಿಮ್ಮಣ ನಾಯಕ, ಓಬಣ್ಣ ನಾಯಕ, ಚಿಕ್ಕಣ ನಾಯಕ, ಕಸ್ತೂರಿ ರಂಗಪ್ಪ ನಾಯಕ, ಭರಮಣ್ಣ ನಾಯಕ, ಹಿರೇ ಮದಕರಿ ನಾಯಕ, ೨ನೇ ಕಸ್ತೂರಿ ರಂಗಪ್ಪ ನಾಯಕ ಮತ್ತು ರಾಜಾವೀರ ಮದಕರಿ ನಾಯಕ ಪ್ರಮುಖರಾಗಿದ್ದಾರೆ.

**ಪರಿಶಿಷ್ಟ ಪಂಗಡಗಳ ರಾಜಕೀಯ ಬೆಳವಣಿಗೆಗಳು**

ಹಳೇ ಮೈಸೂರು ರಾಜ್ಯವು ಹತ್ತೊಂಬತ್ತನೆ ಶತಮಾನದಿಂದಲೇ ಪ್ರಾತಿನಿಧಿಕ ಸಂಸ್ಥೆಗಳನ್ನು ಸ್ಥಾಪಿಸಿ ಬೆಳೆಸಿಕೊಂಡು ಬಂದ ಖ್ಯಾತಿಯನ್ನು ಹೊಂದಿದೆ. ೧೮೮೧ರಲ್ಲಿ ಒಂದು ರೆಪ್ರಸೆಂಟೇಟಿವ್ ಅಸೆಂಬ್ಲಿಯನ್ನು, ೧೯೦೭ರಲ್ಲಿ ಒಂದು ಶಾಸನ ಪರಿಷತ್ತನ್ನು ಸ್ಥಾಪಿಸಿ ಮೈಸೂರು ಪ್ರಜಾಸತ್ತಾತ್ಮಕನ ಸಂಸ್ಥೆಗಳ ಬೆಳವಣಿಗೆಗ ನಾಂದಿಹಾಡಿತು. ೧೯೦೯ರ ಮಾರ್ಲೇ ಮೀಂಟೋ ಸುಧಾರಣೆಗಳುನ ಪ್ರಕ್ರಿಯೆಯನ್ನು ಇನ್ನಷ್ಟು ಶೀಘ್ರಗೊಳಿಸಿದವು. ಇದರೊಂದಿಗೆ ಕೆಲವು ಪ್ರಮುಖ ಬ್ರಾಹ್ಮಣೇತರ ವರ್ಗಗಳು ಸಂಘಟಿಸ್ಪಟ್ಟು ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ಪಡೆಯುವಲ್ಲಿ ಪೈಪೋಟಿಗಿಳಿದವು. ಪ್ರಾರಂಭದಲ್ಲಿ ಬ್ರಾಹ್ಮಣೇತರ ಜಾತಿ ಗುಂಪುಗಳಾದ ಲಿಂಗಾಯರ, ಒಕ್ಕಲಿಗ, ಹಾಗೂ ಮುಸ್ಲಿಂ ಸಮುದಾಯದ ನಾಯಕರು 'ಪ್ರಜಾಮಿತ್ರ ಮಂಡಳಿ', 'ಪೀಪಲ್ಸ್ ಫೆಡರೇಷನ್' ಮುಂತಾದ ವೇದಿಕೆಗಳನ್ನು ಕಟ್ಟಿಕೊಂಡು ರಾಜಕೀಯ ಸ್ಪರ್ಧೆ ನೀಡಿದರುಸೌತ್ಬರೋ ಸಮಿತಿ: ಬ್ರೀಟಿಷ್ ಸರ್ಕಾರ ಭಾರತದಲ್ಲಿ ಮತದಾನದ ಹಕ್ಕನ್ನು ನೀಡುವ ಮೂಲಕ ರೈಟ್ ಅನರಲ್ ಲಾರ್ಡ್ ಎಂಬ ನೇತೃತ್ವದಲ್ಲಿ ಚುನಾವಣಾ ಹಕ್ಕಿನ ಸಮಿತಿಯನ್ನು ೧೯೧೭ರಲ್ಲಿ ರಚಿಸಾಲಾಯಿತುಸೈಮನ್ ಅಯೋಗ: ೧೯೧೯ರಲ್ಲಿ ಭಾರತ ಸರ್ಕಾರದಲ್ಲಿ ಕಾಯ್ದೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಪರಿಶೀಲಿಸಲು ಮತ್ತು ಭಾರತಕ್ಕೆ ಸ್ವಯಂ ಆಡಳಿತ ನಿರ್ವಹಿಸಲು ಕಾಲ ಪರಿಪಕ್ವವಾಗಿದೆಯೆ ಎಂಬುದನ್ನು ತಿಳಿಯಲು ಸರ್ ಜಾನ್ ಸೈಮನ್ ಎಂಬುವುದನ್ನು 'ದುಂಡು ಮೇಜಿನ ಸಮ್ಮೇಳನಗಳು: ಬ್ರಿಟನ್ ಕಾರ್ಮಿಕ ಪಕ್ಷದ ಪ್ರಧಾನಿಯಾಗಿದ್ದ ರಾಮ್ಸೇಮ್ಯಾಕ್ ಡೋನಾಲ್ಡ್ ಅಧ್ಯಕ್ಷತೆಯಲ್ಲಿ ಲಂಡನ್ನಲ್ಲಿ ಭಾರತದ ಸಂವಿಧಾನ ರಚನೆ, ಸಂವಿಧಾನ ಸ್ವರೂಪ ವಿಷಯಗಳ ಕುರಿತು ಚರ್ಚಿಸಲು ಸಭೆ ಕರೆದಿದ್ದರು ಈ ಸಭೆಯಲ್ಲಿ ಬಹಳ ಮುಖ್ಯವಾಗಿ ಆಗಸ್ಟ್ ೧೭, ೧೯೩೨ರಂದು ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ಸರ್ಕಾರವನ್ನು ಅಸ್ತಿತ್ವಕ್ಕೆ ತರಬೇಕು ಎಂಬುಹುದನ್ನು ಸೂಚಿಸುವ ಮೂಲಕ ಎಲ್ಲಾ ವರ್ಗದ ಜನರಿಗೆ ಭಾರತೀಯ ಮತದಾನದ ಹಕ್ಕಿನ (ಲೋಥಿಯಾನ್) ಸಮಿತಿಯನ್ನು ೧೯೩೧ ಡಿಸೆಂಬರ್ ನಲ್ಲಿ ನೇಮಿಸಲಾಯಿತು.

ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸರಕಾರದ ಯಶಸ್ಸು ಅಲ್ಲಿನ ಪ್ರಜೆಗಳ ರಾಜಕೀಯ ಧ್ರುವಿಕರಣ ವಾಗಬೇಕದರೆ ರಾಜಕೀಯದಲ್ಲಿ ಎರಡು ಪ್ರಕ್ರಿಯೇ ಅಷ್ಟೇ ಮುಖ್ಯ ಮೊದಲನೇಯದಾಗಿ ರಾಜಕಾರಣದಲ್ಲಿ ವಿವಿಧ ಸಾಮಜಿಕ ಗುಂಪುಗಳೊಂದಿಗೆ ಸಮೀಕರಣ ಎರೆಡನೇದಾಗಿ ಜಾತಿ ಅಧಾರದಲ್ಲಿ ಜನಸಂಖ್ಯೆ ನಮ್ಮಲ್ಲಿ ರಾಜಕೀಯ ಧೃವಿಕರಣಕ್ಕೆ ಹೊಸ ಚಾಲನೆ ಬಂದದ್ದು೧೯೭೦ರ ದಶಕದಲ್ಲಿ ದೇವರಾಜು ನೀಡಿದರು. ಪ್ರಥಮ ಬಾರಿಗೆ ಹಿಂದುಳಿದ ವರ್ಗಗಳು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು ಅದು ಪ್ರಥಮ ಬಾರಿಗೆ ಅಹಿಂದ ರಾಜಕೀಯ ಧೃವಿಕರಣಕ್ಕೆ ದಾರಿಮಾಡಿಕೊಟ್ಟಿತು. ಇದರರ್ಥ ಎಲ್ಲಾ ಸಮುದಾಯಗಳು ಈ ರಾಜಕೀಯ ಸಮೀಕರಣದಲ್ಲಿ ಬಹು ಮುಖ್ಯವಾಗಿ ೧೯೬೭ರಲ್ಲಿ ಕರ್ನಾಟಕದಲ್ಲಿ ಹೊಸ ರಾಜಕೀಯ ಇತಿಹಾಸ ಪ್ರಾರಂಭದ ಕಾಲಘಟ್ಟವಿದು, ದೇವರಾಜು ಅರಸು ರಾಜ್ಯದ ಮುಖ್ಯಮಂತ್ರಿಯಾದಗ ಎಲ್.ಜಿ. ಹಾವನೂರು ರವರು ಕಾಂಗ್ರೇಸ್ ಪಕ್ಷದಲ್ಲಿ ಗುರಿತಿಸಿಕೊಳ್ಳುವ ಮೂಲಕ ಹಿಂದುಳಿದ ವರ್ಗಗಳ ಅಯೋಗಗಳನ್ನು ರಚಿಸಿ ಸಂವಿಧಾನದಲ್ಲಿ ಅಳವಡಿಸಿದ ಮೀಸಲಾತಿ ಹಿನ್ನಲೆಯಲ್ಲಿ ಕರ್ನಾಟಕದ ಪರಿಶಿಷ್ಟ ವರ್ಗಗಳಾಗಿ ಹಲವಾರು ಸಮುದಾಯಗಳು ಗುರಿತಿಸಿಕೊಂಡುವು ಅವುಗಳಲ್ಲಿ ಬಹಳ ಪ್ರಮುಖವಾಗಿ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳಲ್ಲೆ ಪ್ರಬಲವೆನಿಸಿಕೊಂಡಿರುವ ಬುಡಕಟ್ಟು

 Copyright @ 2025 Author

ಸಮುದಾಯಗಳಾದ ನಾಯಕ, ಬೇಡ, ವಾಲ್ಮೀಕಿ, ತಳವಾರ, ಈ ಸಮುದಾಯದ ರಾಜಕೀಯ ಪ್ರತಿನಿಧಿಗಳು. ಇಂದು ಮೀಸಲಾತಿಯಿಂದ ಗೆದ್ದು ಬಂದ ರಾಜ್ಯದ ರಾಜ್ಯಕಾರಣಿಗಳು ಪಂಚಾಯಿತಿ ಸದಸ್ಯರುಗಳಿಂದ ಹಿಡಿದು ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ವಿಧಾನ ಸಭೆ, ವಿಧಾನ ಪರಿಷತ್ ಸದಸ್ಯರು, ಸಹಕಾರ ಸಂಘಗಳ ಹಾಗು ಮಾರ್ಕೆಟಿಂಗ್ ಸದಸ್ಯರುಗಳಿಂದ ಲೋಕಸಭೆಯ ಸದಸ್ಯರುಗಳಾಗಿ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದನ್ನು ನೋಡಬಹುದು.

ಜಾತಿ ಆಧಾರಿತ ಸಂಘಟನೆಗಳು ಮತ್ತು ಚಳುವಳಿಗಳು

ಜಾತಿ ಆಧಾರದ ಮೇಲೆ ವಿವಧ ಒತ್ತಡ ಗುಂಪುಗಳು ಭಾರತೀಯ ರಾಜಕೀಯದಲ್ಲಿ ಪ್ರಭಾಶಾಲಿ ಪಾತ್ರವನ್ನು ವಹಿಸುತ್ತವೆ. ಈ ಗುಂಪುಗಳು ಮತ್ತು ಚಳುವಳಿಗಳು ಅನೌಪಚಾರಿಕ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿತ್ತಾವೆ ಮತ್ತು ಅವರ ಹಿತಾಸಕ್ತಿಯನ್ನು ಪರಿಗಣಿಸಲು ಆಡಳಿತ ಪಕ್ಷದ ಮೇಲೆ ಒತ್ತಡ ಹಾಕುವುದ ಮೂಲಕ ಸಮಾಜದಲ್ಲಿರುವ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಜಾತಿಯಾದರಿತ ಸಂಘಟನೆಗಳು ಅವಶ್ಯಕ. ಜಾತಿಯ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಾಗೂ ರಾಜಕೀಯ ಸ್ಥಾನಮಾನ, ಅಧಿಕಾರ ಅಂತಸ್ತುಗಳಿಗಾಗಿ ಈಕ್ಷೇತ್ರವನ್ನು ಪ್ರವೇಸುವವರ ಸಂಖ್ಯೆ ಹೆಚ್ಚಾಗಿದ್ದು ೧೯ನೇ ಶತಮಾನ ಪ್ರಾರಂಭಕ್ಕಾಗಲೇ ಬ್ರಾಹ್ಮಣರು ಸಂಘಟಿತರಾಗಿ ತಮ್ಮ ಕುಂದು ಕೊರತೆಯನ್ನು ಪರಿಹರಿಸಿಕೊಂಡು ಅಭಿವೃದ್ಧಿಗೆ ಪ್ರಯತ್ನಿಸಿದ್ದನ್ನು ಚರಿತ್ರೆ ಮೂಲಕ ತಿಳಿಯಬಹುದು ನಂತರ ಒಕ್ಕಲಿಗ ಮತ್ತು ಲಿಂಗಾಯತು ಹೀಗೆ ಜಾತಿ ಸಂಘಟನೇ ಮೂಲಕ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡು ನಂತರದಲ್ಲಿ ಸಣ್ಣ ಪುಟ್ಟ ಸಮುದಾಯಗಳಾದ ಹಿಂದುಳಿದ ದಲಿತ ಅಲ್ಪಸಂಖ್ಯಾತ ಹಾಗೂ ಪ್ರತಿ ಜಾತಿ ಸಂಘಟನೆಗಳು ಚಳುವಳಿಯ ಮೂಲಕ ಸಮುದಾಯಗಳು ಸಂಘಟನೆಗೊಂಡುರಾಜಕೀಯವಾಗಿ ಗುರುತುಸಿಕೊಳ್ಳಲು ಪ್ರಾರಂಭಗೊಂಡವು

## ಪರಿಶಿಷ್ಟ ಪಂಗಡಗಳ ರಾಜಕೀಯ ನಾಯಕತ್ವ

ರಾಜಕೀಯ ಭಾಗವಹಿಸುವಿಕೆಗೆ ನಾಯಕತ್ವವವು ಪ್ರಜಾಸತ್ತಾತ್ಮಕ ಆಡಳಿತದ ಕೇಂದ್ರ ಬಿಂದುವಾಗಿದೆ. ರಾಜಕೀಯ ಪ್ರಕ್ರಿಯೆಗಳು ಮತ್ತು ಪಲಿತಾಂಶಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಸೈದ್ಧಾಂತಿಕ ಗುರಿಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಸಾರ್ವಜನಿಕ ನೀತಿಗಳ ಮೇಲೆ ಪ್ರಭಾವ ಬೀರುವ ಹಾಗೂ ನಿರ್ಧಾರ ತೆಗೆದುಕೊಳ್ಳುವ ಪರಿಕಲ್ಪನೆಯಾಗಿದೆ, ರಾಜಕೀಯ ಸಿದ್ಧಾಂತ, ಇತಿಹಾಸ, ಮನೋವಿಜ್ಞಾನ, ಮತ್ತು ನಿರ್ವಹಣಾ ಅಧ್ಯಯನಗಳು ಸೇರಿದಂತೆ ಅನೇಕ ವಿಭಾಗಗಳನ್ನು ಹೊಂದಿದೆ ಸಮರ್ಥ ನಾಯಕತ್ವಕ್ಕೆ ಅನುಭವ ಅತ್ಯಗತ್ಯ, ಒಬ್ಬ ನಾಯಕನಿಗೆ ಮುಖಾಮುಖಿಯಾಗಿಯಾಗುವ ಅಭ್ಯಾಸವಿದ್ದರೆ ಅವನು ಕ್ರಮೇಣ ಆತ್ಮವಿಶ್ವಾಸ ಮತ್ತು ಕೌಶಲ್ಯವನ್ನು ಗಳಿಸುತ್ತಾನೆ ಮತ್ತು ಯಾವುದೇ ರೀತಿಯಾ ಪರಿಸ್ಥಿತಿಯನ್ನು ಎದುರಿಸಲು ಸಮರ್ಥನಾಗುತ್ತಾನೆ, ಬುದ್ಧಿವಂತಿಕೆ, ಚುರುಕುತನ, ದೃಢ ನಿಶ್ಚಯ, ಆತ್ಮದ ಆಸ್ಥಿರತೆ ಮತ್ತು ಉತ್ತಮ ನಿರ್ಹಾಯವನ್ನು ಹೊಂದಿರುತ್ತಾರೆ, ಆತನಿಗೆ ಸೌಜನ್ಯ, ಆತ್ಮವಿಶ್ವಾಸ ಮತ್ತು ಉತ್ಸಾಹದ ವಾತಾವರಣವನ್ನು ಸೃಷ್ಟಿಸಲು ಸಾಧ್ಯವದರೆ, ಆತನು ಇತರರ ಬೇಂಬಲವನ್ನು ಪಡೆಯಲು ಸಮರ್ಥನಾಗಿರುತ್ತಾನೆ, ಆದ್ದರಿಂದ ಒಬ್ಬ ನಾಯಕನು ಇತತರನ್ನು ಮುನ್ನೆಡಸಲು ವಿಭಿನ್ನ ಸಕಾರಾತ್ಮಕ ಗುಣಗಳನ್ನು ಹೊಂದಿರಬೇಕು. ಪರಿಣಾಮಕಾರಿ ನಾಯಕತ್ವದ ಗುಣಗಳಲ್ಲಿ ಧೈರ್ಯ, ಶಕ್ತಿ, ಸಂವಹನ ಮಾಡುವ ಸಾಮಥ್ಯ, ಜ್ಞಾನ, ನಿರ್ಃಯ, ಸಮಗ್ರತೆ ಮತ್ತು ಪರಪಸ್ಪರ ಕೌಶಲ್ಯಗಳು ಸೇರಿವೆ. ಆ ದೃಷ್ಟಿಯನ್ನು ಕಾರ್ಯಗತಗೊಳಿಸುವನ ಶಕ್ತಿಯೊಂದಿಗೆ ದೃಷ್ಟಿವು ಒಂದು ಪ್ರಮುಖ ಗುಣಾವಾಗಿದೆ. (ಎ.ಒ ಛಡಿಊತಿ)

ನಾಯಕನು ಕ್ರಮೇಣ ಆತ್ಮವಿಶ್ವಾಸ ಮತ್ತು ಕೌಶಲ್ಯವನ್ನು ಗಳಿಸುತ್ತಾನೆ ಮತ್ತು ಯಾವುದೇ ರೀತಿಯಾ ಪರಿಸ್ಥಿತಿಯನ್ನು ಎದುರಿಸಲು ಸಮರ್ಥನಾಗುತ್ತಾನೆ, ಬುದ್ಧಿವಂತಿಕೆ, ಚುರುಕುತನ, ದೃಢ ನಿಶ್ಚಯ, ಆತದ ಆಸ್ಥಿರತೆ ಮತ್ತು ಉತ್ತಮ ನಿರ್ಹಾಯವನ್ನು ಹೊಂದಿರುತ್ತಾರೆ, ಆತನಿಗೆ ಸೌಜನ್ಯ, ಆತ್ಮವಿಶ್ವಾಸ ಮತ್ತುಉತ್ಸಾಹದ ವಾತಾವರಣವನ್ನು ಸೃಷ್ಟಿಸಲು ಸಾಧ್ಯವದರೆ, ಆತನು ಇರರ ಬೇಂಬಲವನ್ನು ಪಡೆಯಲು ಸಮರ್ಥನಾಗಿರುತ್ತಾನೆ, ಆದ್ದರಿಂದ ಒಬ್ಬ ನಾಯಕನು ಇತತರನ್ನು ಮುನ್ನೆಡಸಲು ವಿಭಿನ್ನ ಸಕಾರಾತ್ಮಕ ಗುಣಗಳನ್ನು ಹೊಂದಿರಬೇಕು. ಅದೇ ರೀತಿಯಾಗಿ ಪರಿಶಿಷ್ಟ ಪಂಗಡಗಳು ಬಹುತೇಕ ಗ್ರಾಮ ತಾಲೂಕು ಜಿಲ್ಲಾ ಪಂಚಾಯಿತಿಗಳಲ್ಲಿ ರಾಜಕೀಯ ನಾಯಕ್ವವನ್ನು ಪಡೆದುಕೊಂಡಿದೆ. ಇಂದು ಪರಿಶಿಷ್ಟ

 Copyright @ 2025 Author

ಪಂಗಡ ಸಮುದಾಯದ ವಿದ್ಯಾವಂತರು, ಪ್ರಜಾಪ್ರತಿನಿಧಿಗಳಾಗಿ ಆಯ್ಕೆಗೊಳ್ಳುತ್ತಿದ್ದಾರೆ. ಹೊಸ ತಲೆಮಾರಿನ ರಾಜಕಾರಣ ಬಗ್ಗೆ ತೀವ್ರ ಕುತೂಹಲ ಮತ್ತು ಆಸಕ್ತಿ ಇದ್ದು, ಯುವನಾಯಕರು ಸಂಘಟನೆಗಳ ಮೂಲಕ ರಾಜಕೀಯದಲ್ಲಿ ವ್ಯಾಪಕವಾಗಿ ಪ್ರತಿ ತಾಲೂಕು ಮತ್ತು ಜಿಲ್ಲೆಯಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ಈ ಸಮುದಾಯದ ರಾಜಖಿಯ ಅಲೋಚನೆಗಳು ಇತ್ತಿಚ್ಚಿಗೆ ಉಂಟಾದ ಬೆಳವಣಿಗೆಗಳು ಆಶಾದಾಯಕವು ಹಾಗೂ ವಿಶಿಷ್ಟವೂ ಆಗಿದೆ. ಇದರ ಜೊತೆಗೆ ಪ್ರಸ್ತುತ ದಿನಮಾನಗಳಲ್ಲಿ ಈ ಸಮುದಾಯದ ಸಕ್ಷಾರತೆ ಗಣನೀಯ ಮಟ್ಟದಲ್ಲಿ ಹೆಚ್ಚುತ್ತಿದ್ದು. ರಾಜಕೀಯ ಪಲ್ಗೊಳ್ಳುವಿಕೆಯು ಸಹ ಗಮನಾರ್ಹವಾಗಿ ರಾಜಕೀಯ ಮುನ್ನಡೆ ಮತ್ತು ಪ್ರಗತಿಯಲ್ಲದೆ ಯಾವುದೇ ಜನಾಂಗದ ಆರ್ಥಿಕ ಪ್ರಗತಿ ಸಾಧ್ಯವಿಲ್ಲ ಎಂಬುವುದನ್ನು ಎತ್ತೀನ ದಿನಗಳಲ್ಲಿ ಅರಿತುಕೊಂಟಿದ್ದೆನೆ. ಎದು ಪರಿಶಿಷ್ಟ ಪಂಗಡಗಳ ಸಮುದಾಯಕ್ಕೆ ಸರಿಯಾಗಿ ಅನ್ವಯಿಸುತ್ತದೆ. ಇಂದು ಈ ಸಮುದಾಯವು ರಾಜಕೀಯವಾಗಿ ಗುರುತಿಸಲ್ಪಟ್ಟಿದ್ದರೂ ಸಹ ಜನಾಂಗದ ಸರ್ವತೋಮುಖ ಅಭಿವೃದ್ಧಿ ಕಾಣಲು ಸಾಧ್ಯತೆ ಕಡೆಗೆ ಸಾಗಿದೆ ರಾಜಕೀಯ ಜನಜಾಗೃತಿ ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳಲ್ಲಿ ಮೂಡಿದೆ. ಜನಾಂಗದ ರಾಜಕೀಯ ನಾಯಕರು ಸ್ಥಳೀಯ ಸರ್ಕಾರ, ವಿಧಾನಸಭೆ ಮತ್ತು ಲೋಕಸಭೆ ನಗರ–ಗ್ರಾಮೀಣ ಸ್ಥಳೀಯಾ ಆಡಳಿತ ರಾಜಕೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸಕ್ರಿಯವಾಗಿ ಸ್ಪರ್ಧಿಸುತ್ತಿದ್ದಾರೆ. ಇಂದು ರಾಜ್ಯದ ವಿವಿದಡೆ ಪರಿಶಿಷ್ಟ ಪಂಗಡಗಳು ರಾಜಕೀಯ ನಾಯಕರು ಸ್ಥಳೀಯ ರಾಜಕೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆನಗರ ಸಭೆಪುರಸಭೆ ಪಟ್ಟಣ ಪಂಚಾಯಿತಿ ಮತ್ತು ನಿಗಮಮಂಡಳಿಗಳಿಗೆ ಮೂಲಕ ಆಯ್ಕೆಯಾಗಿ ಹೆಚ್ಚು ಹೆಚ್ಚು ಜನರನ್ನು ಜನನ್ನು ಆಕರ್ಷಿತರನ್ನಾಗಿ ಮಾಡಿರುವುದು ಮತ್ತು ಆಡಳಿತ ಸಂಸ್ಥೆಗಳ ಬಗ್ಗೆ ರಾಜಕೀಯ ಅರಿವು ಮತ್ತು ಪಾಲ್ಗೊಳ್ಳುವಿಕೆ ಹೆಚ್ಚುಗುತ್ತಿರುವುದು ಸತ್ಯ ಸಂಗತಿಯಾಗಿದೆ ಹಾಗೂ ಹಲವು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ಅನುಭವಿಸುತ್ತಿರುವುದನ್ನು ನೋಡಬವುದಾಗಿದೆ ಒಟ್ಟಾರೆಯಾಗಿ ಇಂದು ಪರಿಶಿಷ್ಟ ಪಂಗಡಗಳ ಸಮುದಾಯದ ಜನ ರಾಜಕೀಯದಲ್ಲಿ ಹೆಚು ಆಸಕ್ತಿವಹಿಸುತ್ತಿರುವುದನ್ನು ನೋಡಬವುದು ಇಂದು ಈ ವರ್ಗದವರು ಮತದಾರರಾಗಿ, ಸಂಘಟಕರಾಗಿ,ಪಕ್ಷದಸದಸ್ಯರಾಗಿ ರಾಜಕೀಯದಲ್ಲಿ ಸಕ್ರಿಯಾವಾಗಿ ಭಾಗವಹಿಸಲಾಗಿದೆ.

ಮೀಸಲು ಕ್ಷೇತ್ರಗಳು

ಮೀಸಲು ಕ್ಷೇತ್ರಗಳಲ್ಲಿ ಸಾಮನ್ಯಾವಾಗಿ ಪರಿಶಿಷ್ಟ ಮತದಾರರ ಜನಸಂಖ್ಯೆ ಹೆಚ್ಚಾಗಿರುತ್ತದೆ. ಆದ್ದರಿಂದ ಪರಿಶಿಷ್ಟರ ಮತಗಳು ಸ್ಪರ್ಧಿಸಿದ ಎಲ್ಲಾ ಪರಿಶಿಷ್ಟ ಅಭ್ಯರ್ಥಿಗಳ ನಡುವೆ ನಾನಾ ಕಾರಣಗಳಿಂದ ಹಂಚಿಕೆಯಾಗುತ್ತವೆ. ಮತದಾರರ ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದವರು ಆರನೇ ಸ್ಥಾನದಲ್ಲಿರುವ ಸಮುದಾಯ ರಾಜ್ಯ ರಾಜಕೀಯ ಗಮನಿಸಿದಾಗ ತಮ್ಮ ಹಿತಾಸಕ್ತಿಯನ್ನು ರಕ್ಷಸುವ ಅಭ್ಯರ್ಥಿಯನ್ನು ಆಯ್ಕೆಮಾಡುವಲ್ಲಿ ಯಶಸ್ವಿಯಾಗುತ್ತಾರೆ. ಮೀಸಲು ವ್ಯವಸ್ಥೆಯ ಚುನಾವಣಾ ರಾಜಕೀಯದಲ್ಲಿ ಚುನಾಯಿಸುವಲ್ಲಿ ಚುನಾವಣಾಗಳಿಗೆ ತನ್ನದೇಯಾದ ಮಹತ್ವವಿದೆ ಚುನಾವಣೆಗಳಲ್ಲಿ ಚುನಾವಣಾ ಕ್ಷೇತ್ರಗಳಲ್ಲಿ ಎರೆಡು ರೀತಿಯಾ ಕ್ಷೇತ್ರಗಳನ್ನು ನೋಡಬಹುದು. ಒಂದು ಸಾಮಾನ್ಯ ಕ್ಷೇತ್ರ ಇನ್ನೊಂದು ಮೀಸಲು ಕ್ಷೇತ್ರ ಕರ್ನಾಟಕದಲ್ಲಿ ಒಟ್ಟು ೧೫ ವಿಧಾನ ಸಭಾ ೦೨ ಲೋಕ ಸಭಾ ಕ್ಷೇತ್ರಗಳನ್ನು ಪರಿಶಿಷ್ಟ ಪಂಗಡಗಳಿಗೆ ಮೀಸಲಿಡಲಾಗಿದೆ. ನಾಯಕ ಸಮುದಾಯವು ಇಂದು ಮೀಸಲು ಕ್ಷೇತ್ರಗಳಲ್ಲಿ ತನ್ನ ರಾಜಕೀಯ ಸ್ಥಾನಮಾನವನ್ನು ಉತ್ತಮವಾಗಿಟ್ಟುಕೊಂಡಿದೆ. ಅದನ್ನು ಹೊರತು ಪಡಿಸಿ ಸಾಮಾನ್ಯ ಕ್ಷೇತ್ರಗಳಲ್ಲಿ ತಮ್ಮ ಪ್ರಾಬಲ್ಯವನ್ನು ಈ ಸಮುದಾಯವು ಹೊಂದಿದೆ. ಈ ಸಮುದಾಯವರು ವಿವಿಧ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡು ಹೆಚ್ಚು ಮಾನ್ಯತೆಯನ್ನು ಪಡಿದಿದೆ.

ಕರ್ನಾಟಕ ವಿಧಾನ ಸಭಾ ಪರಿಶಿಷ್ಟ ಪಂಗಡಗಳ ಕ್ಷೇತ್ರಗಳು

೨೦೦೨ ಕುಲದೀಪ್ ಸಿಂಗ್ ಅವರ ನೇತೃತ್ವದಲ್ಲಿ ಮರು ನೇಮಕ ಮಾಡಲಾಯಿತು ಇದರ ಅನ್ವಯ ಕರ್ನಾಟಕ
ವಿಧಾನ ಸಭೆಯಲ್ಲಿ ೨೨೪ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಗಳಿಗೆ ೧೫ ಕ್ಷೇತ್ರಗಳು ಮೀಸಲಿಡಲಾಗಿದೆ.

- ಯಮಕನ ಮರಡಿ
- ಸುರಪುರ
- ರಾಯಚೂರು ಗ್ರಾಮೀಣ
- ಮಾನ್ವಿ
- ದೇವದುರ್ಗ


Copyright @ 2025 Author

- ಮಸ್ಕಿ
- ಕಂಪ್ಲಿ
- ಸಿರಗುಪ್ಪ
- ಬಳ್ಳಾರಿ ಗ್ರಾಮೀಣ
- ಸಂಡೂರು
- ಕೂಡ್ಲಿಗಿ
- ಮೊಳಕಾಲ್ಮರು
- ಚಳ್ಳಕೆರೆ
- ಜಗಲೂರು
- ಹೆಚ್.ಡಿ.ಕೋಟೆ

ಮೀಸಲು ಕ್ಷೇತ್ರವನ್ನು ಹೊರೆತುಪಡಿಸಿ ಸಾಮಾನ್ಯ ಕ್ಷೇತ್ರಗಳು

- ಗೋಕಾಕ್
- ಅರಬಾವಿ
- ಮಧುಗಿರಿ

**ಸಂವಿಧಾನಾತ್ಮಕ ಅವಕಾಶಗಳು**

ಪರಿಶಿಷ್ಟ ಜಾತಿ ಮತ್ತು ಪಂಗಡ ಜನರ ಭದ್ರತೆ ಮತ್ತು ಸಂರಕ್ಷಣೆಗಳನ್ನು ಒದಗಿಸಲು ಸಂವಿಧಾನವು ಕೆಳಗಿನ ವಿಧಿಗಳನ್ನು ಅನುಷ್ಠಾನಗೊಳಿಸಿ ಈ ಜನರ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಪಡೆಸುವ ಉದ್ದೇಶದಿಂದ ವಿಶೇಷ ಕ್ರಮವನ್ನು ಸೂಚಿಸಿದೆ

- ವಿಧಿ ೪೬ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಶಕ್ತಿಗಳ ಸಂವರ್ಧನೆ
- ವಿಧಿ ೩೩೦ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಲೋಕಸಭೆಯಲ್ಲಿ ಸ್ಥಾನ ಮೀಸಲಿಡುವುದು
- ವಿಧಿ ೩೩೨ ರಾಜ್ಯಗಳ ವಿಧಾನಸಭೆಗಳಲ್ಲಿ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳಿಗೆ ಮೀಸಲಿಡುವುದು
- ವಿಧಿ ೩೩೮ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ರಾಷ್ಟ್ರೀಯ ಅಯೋಗ ರಚನೆ
- ವಿಧಿ ೨೪೪ ೧ನೇ ಭಾಗದಲ್ಲಿ ನಮೋದಿಸಲ್ಪಟ್ಟ ಅನುಸೂಚಿತ ಹಾಗೂ ಆದಿವಾಸಿ ಪ್ರದೇಶಗಳಿಗೆ ವಿಶೇಷ ಆಡಳಿತ ವ್ಯವಸ್ಥೆಗೆ ಸಂಭಂದಿಸಿದೆ
- ಸಂವಿಧಾನದ ವಿಧಿ ೧೪ ಬುಡಕಟ್ಟು ಜನರನ್ನುಒಳಗೊಂಡಂತೆ ಎಲ್ಲಿಗೂ ಸಮಾನತೆ ಅವಕಾಶವನ್ನು ಕಲ್ಪಿಸಿತು.
- ಸಂವಿಧಾನದ ೪೫ ನೇ ವಿಧಿ ಅನ್ವಯ ಶಿಕ್ಷಣ ವಂಚಿತರಾದ ಹಾಗೂ ನಿರ್ಲಕ್ಷಕ್ಕೆ ಒಳಗಾದ ಬುಡಕಟ್ಟು ಸಮುದಾಯಗಳ ಮಕ್ಕಳ ಶಿಕ್ಷಣದ ಹಕ್ಕನ್ನು ಕಲ್ಪಿಸಿತು.
- ಪರಿಶಿಷ್ಟ ಪಂಗಡಗಳಿಗೆ ಸಂವಿಧಾನದ ೧೪ ನೇ ವಿಧಿ ಅನ್ವಯ ರಾಜ್ಯ ನಿರ್ದೇಶಕ ತತ್ವಗಳ ಅಡಿಯಲ್ಲಿ ರಕ್ಷಣೆ ಒದಗಿಸಲು ಅವಕಾಶ ಮಾಡಿಕೊಟ್ಟಿತು.
- ೨೪೩ ಡಿ ಮತ್ತು ೨೪೩ಟಿವಿಧಿನ್ವಯ ಪಂಚಾಯಿತಿ ಮತ್ತು ಮುನ್ಸಿಪಾಲಿಟಿಗಳಲ್ಲಿ ಪರಿಶಿಷ್ಠ ಪಂಗಡಗಳಿಗೆ ಅವಕಾಶ ನೀಡಿತು.
- ಸಂವಿಧಾನದ ೩೪೨ ವಿಧಿಯ ಪ್ರಕಾರ ರಾಷ್ಟ್ರಪತಿಯವರು ಅರ್ಹ ವರ್ಗವನ್ನು ಬುಡಕಟ್ಟು ಪಟ್ಟಿಗೆ ಸೆರಿಸಲಾಯಿತು.

**ಪರಿಶಿಷ್ಠ ಪಂಗಡದ ಕಲ್ಯಾಣಕಾರ್ಯಕ್ರಮಗಳು**

ಭಾರತದ ಸಂವಿಧಾನ ಕಲಂ ೩೪೨(೧) ಪ್ರಕಾರ ರಾಷ್ಟ್ರಪತಿಯವರು ಅನುಸೂಚಿತ ಬುಡಕಟ್ಟುಗಳ ಪಟ್ಟಿಗೆ ಸೇರಿದ ಸಮುದಾಯಗಳನ್ನು ವಿಶೇಷ ಸೌಲಭ್ಯಗಳನ್ನು ಪಡೆಯಬಹುದು ಆಯಾ ರಾಜ್ಯಗಳು ಸಹ ಅನುಸೂಚಿತ ಬುಡಕಟ್ಟುಗಳಿಗೆ ಸಂವಿಧಾನ ಬದ್ದವಾದ ಸೌಲಭ್ಯಗಳನ್ನು ಮತ್ತು ಮೀಸಲಾತಿಯ

 Copyright @ 2025 Author

ಹಕ್ಕುಗಳನ್ನು ರಕ್ಷಿಸುವುದು. ಕಲಂ೨೪೪ ಪ್ರಕಾರ ರಾಷ್ಟ್ರಪತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರು ವಾಸಿಸುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಬಹುದಾಗಿದೆ. ಸನುಚ್ಛೇದ ೨೯೯ರ ಪ್ರಕಾರ ಕೇಂದ್ರ ಸರ್ಕಾರ ನಿರ್ದೇಶನದಂತೆ ರಾಜು ಸರ್ಕಾರಗಳು ರಾಜ್ಯದ ಅನುಸೂಚಿತ ಬಡಕಟ್ಟುಗಳ ಕಲ್ಯಾಣಕ್ಕೆ ಅಗತ್ಯವಾದ ನಿರ್ದಿಷ್ಟ ಯೋಜನೆಗಳನ್ನುಬ ಕಾರ್ಯಗತಗೊಳಿಸುವಂತೆ ತಿಳಿಸುತ್ತದೆ. ಸಂವಿಧಾನ ೨೭೫ನೇ ಅನುಚ್ಛೇದನವು ಸಂವಿಧಾನದ ಸವಲತ್ತುಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ಸಹಾಯವನ್ನು ನೀಡುವ ಅವಕಾಶ ಮಾಡಿಕೊಟ್ಟಿದೆ. ಸಂವಿಧಾನದ ೩೩೦ ಮತ್ತು ೩೩೨ ಕಲಂ ಸನುಸೂಚಿತ ಬುಡಕಟ್ಟುಗಳಿಗೆ ನಾಗರೀಕ ಸೇವೆಗಳಲ್ಲಿ ಮೀಸಲಾತಿ ಹೊದಗಿಸಿಕೊಡುವ ಅವಕಾಶವನ್ನು ಒದಗಿಸಿದೆ. ಸಂವಿಧಾನದ ೧೫,೧೬, ಮತ್ತು ೧೬ನೇ ಅನುಚ್ಛೇಧನಗಳು ಬುಡಕಟ್ಟು ಹಿತಾಸಕ್ತಿಯನ್ನು ಮತ್ತು ಜೀವನವನ್ನು ಕಾಪಾಡುವ ಉದ್ದೇಶವನ್ನು ಹೊಂದಿದೆ. ಸಂವಿಧಾನದ ೫ನೇ ಪಟ್ಟಿ ಭಾಗ-ಬಿ ೪ರ ಭಾಗವು ಬುಡಕಟ್ಟು ಸಲಾಹ ಸಮಿತಿ ರಚಿಸಿಕೊಳ್ಳುವ ಅವಕಾಶ ಕಲ್ಪಿಸಿದೆ ಇದು ರಾಜ್ಯದಲ್ಲಿ ಬುಡಕಟ್ಟು ಕಲ್ಯಾಣ ಮತ್ತು ಉನ್ನತಿಗೆ ಸಂಭದಿಸಿದಂತೆ ಸಲಹೆಕೊಡುವುದಾಗಿದೆ. ಕೇಂದ್ರ ಸರ್ಕಾರ ೩೩೫ರ ಪ್ರಕಾರ ವಿಶೇಷ ಅಧಿಕಾರಿಗಳನ್ನು ನೇಮಿಸುತ್ತದೆ. ಈ ಅಧಿಕಾರಿಯು ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವದರಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ೧೯೮೦ರಲ್ಲಿ ಬುಡಕಟ್ಟುಗಳ ಅಭಿವೃದ್ದಿಗೆ ಈ ಯೋಜನೆಯಡಿಯಲ್ಲಿ ಶಿಕ್ಷಣ, ಆರೋಗ್ಯ, ಮತ್ತು ವಸತಿ ಒದಗಿಸುವ ಜೋತೆಗೆ ಕುಟುಂಬ ಆಧಾರಿತ ವರಮಾನದ ಯೋಜನೆಗಳಾದ ಕೃಷಿ, ಹೈನುಗಾರಿಕೆಗೆ ಸಹಕಾರ. ಬುಡಕಟ್ಟು ಕುಶಲಕಲೆಗೆ ಮತ್ತು ಇತರೆ ಪರಿಣಿತಿಗೆ ಹೆಚ್ಚು ಒತ್ತು ಕೊಡಲಾಯಿತು. ಇದರಿಂದ ಶೇಕಡಾ ೯೫ರಷ್ಟು ಬುಡಕಟ್ಟು ನೆಲೆಗಳು ಶಾಲೆಗಳು ಹೊಂದಲು ಸಾಧ್ಯವಾಯಿತು. ೧೯೯೬ ರಲ್ಲಿ ಕೇಂದ್ರ ಸರ್ಕಾರ ೨ನೇ ಅನುಸೂಚಿತ ಪ್ರದೇಶ ಬುಡಕಟ್ಟುಗಳ ಅಯೋಗ ರಚಿಸಿದ್ದು ಇದರಲ್ಲಿ ಬುಡಕಟ್ಟು ಅಭಿವೃದ್ದಿಗೆ ಮತ್ತು ಕಲ್ಯಾಣಕ್ಕೆ ೪೦ ವರ್ಷಗಳ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ಮುಖ್ಯ ಉದ್ದೇಶ ಭೂಮಿ, ನೀರು ಮತ್ತು ಅರಣ್ಯಕ್ಕೆ ಸಂಭಂದಿಸಿದಂತೆ ಬುಡಕಟ್ಟು ಜನರ ಹಕ್ಕುಗಳ ರಕ್ಷಣೆ, ಶಿಕ್ಷಣ ಆರೋಗ್ಯ ಮತ್ತುನ ಇತರೆ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದಾಗಿದೆ.

## ಉಪಸಂಹಾರ

ಸಂಕ್ಷೀಪ್ತವಾಗಿ ಹೇಳುವುದಾದರೆ ಕರ್ನಾಟಕ ರಾಜಕಾರಣದಲ್ಲಿ ಪರಿಶಿಷ್ಟ ಪಂಗಡಗಳಲ್ಲೆ ಪ್ರಬಲ ಜಾತಿಗಳಾದ ನಾಯಕ ಸಮುದಾಯವು ಮುಂದುವರೆದು ರಾಜಕೀಯ ಸಬಲೀಕರಣದತ್ತ ಗಮನಾರ್ಹದಾಪುಗಾಲುಗಳು ಹಿಟ್ಟಿರಿವುದನ್ನು ಗಮನಿಸಬಹುದು. ಸಮಾಜದಲ್ಲಿ ಅಧುನಿಕ ಶಿಕ್ಷಣ ಮತ್ತು ಸರ್ಕಾರದ ಅಭಿವೃದ್ದಿ ಕಾರ್ಯಕ್ರಮಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಸದುಪಯೋಗ ಪಡೆದುಕೊಂಡು ಉದ್ಯೋಗ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಕಲ್ಪಿಸಿಕೊಂಡು ಸಾಮಾಜಿಕ ಸ್ಥಾನಮಾನಕ್ಕೆ ಅನುಗುಣವಾಗಿ ಸಬಲೀಕರಣದತ್ತಸಾಗಿದೆ ಎಂದುಅವಲೋಕಿಸಲಾಗಿದೆ ಪರಿಶಿಷ್ಟ ಪಂಗಡಗಳ ರಾಜಕೀಯ

## ಆಧಾರ ಗ್ರಂಥಗಳು


- ಲಕ್ಷಣ ತೆಲಗಾವಿ ಚಿತ್ರದುರ್ಗ ಜಿಲ್ಲೆಯ ಪಾಳೇಗಾರರ ಆಳ್ವಿಕೆ, ಚಂದ್ರವಳ್ಳಿ ಪೀಂಟ್ರರ್ಸ್, ಚಿತ್ರದುರ್ಗ-೧೯೭೬
- ಸಿ.ಅರ್ ಶ್ಯಾಮಲ ಪೂರ್ವ ಕರ್ನಾಟಕದ ಪಾಳೇಗಾರರು ಒಂದು ಅಧ್ಯಯನ. ಕನ್ನಡ ಸಾಹಿತ್ರ ಪರಿಷತ್ತು, ಬೆಂಗಳುರು, ೨೦೦೮
- ಕೆ. ಎಎಸ್. ಲಾಲ್ ಕನ್ನಡಾನುವಾದ: ವಸಂತ್ ನಾಯಕ್ ಪಲಿಮಾರ್ಕರ್ ಮಧ್ಯಯುಗಿನ ಭಾರತದಲ್ಲಿ ಪರಿಶಿಷ್ಟ ವರ್ಗ- ಜಾತಿಗಳ ವೃದ್ದಿ ಸಾಹಿತ್ಯ ಸಿಂಧು ಪ್ರಕಾಶನ ನೃಪತುಂಗ ರಸ್ತೆ ಬೆಂಗಳೂರು ೨೦೧೨
- ಮಂಜುನಾಥ ಬೇವಿನಕಟ್ಟೆ ವಾಲ್ಮೀಕಿ ಸಮುದಾಯ ಅಭಿವೃದ್ದಿ' ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ ಪ್ರಗತಿ ಪ್ರಿಂಟ್ ಕಮ್ಯೂನಿಕೇಷನ್ ಬೆಂಗಳೂರು-೨೦೦೯


 Copyright @ 2025 Author

- ಕರ್ನಾಟಕದಲ್ಲಿ ಹಿಂದುಳಿದವರ್ಗಗಳ ರಾಜಕೀಯ ಸಂಚಲನ ಶ್ರೀಎಸ್ ಬಂಗಾರಪ್ಪನವರ ರಾಜಕೀಯ ಕುರಿತು ಒಂದು ಅಧ್ಯಯನ ಪಿಹೆಚ್.ಡಿ ಮಹಾಪ್ರಬಂಧ ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-೨೦೦೭
- ಕರ್ನಾಟಕ ರಾಜಕಾರಣದಲ್ಲಿ ಜಾತಿ ಪಾತ್ರ ಶಿವಮೊಗ್ಗ ಜಿಲ್ಲೆಯ ಒಂದು ಅಧ್ಯಯನ ಪಿಹೆಚ್.ಡಿ ಮಹಾಪ್ರಬಂಧ ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-೨೦೨೧
- S.ಐ �಼ಡಿಜಟಚಿಣಚಿ ಚಿಟಿಜ ,಻ಜಜಟಚಿ ಠಿ ಟಿಚಿು಻ಾಡಿಂಭಟಜಚಿ ಚಿಟಿಜ ಕಡಿಥಿಠಿಜಛಿಣ ಂಜ ಓಚಿಥಿಚಿ಻ಚಿ ಅಂಟಟಣಟಿಣಥಿ – ೦ ಖಂಛಿಂಟಂಯಛಿಚಿಟ ಖಣಾಜಥಿ಻ಥಠಿಟಂಡಿುಟಿಂ ಣಉಜ ಖಂಛಿಚಿಟ ಆಥಿಟಿಚಿಟಛಿ ಚಿಟಿಜ ಆಜತಜಟಂಠಿಟಜಟಿಣ ಖಣಡಿಚಿಣಜಉಜ ಂಜ ಣಉಜ ಓಚಿಥಿಚಿ಻ಚಿ ಅಂಟಟಣಟಿಣಥಿ ಎಟಿ ಏಚಿಡಿಟಿಚಿಣಚಿ಻ಚಿ
- Sಛಿಜಜಣಟಜಜ ಖಿಡುಭಜ, ಖಜಜಡಿತಜಜ ಅಂಟಿಣುಣಾಜಟಿಛಿಜ ಚಿಟಿಜ ಕಂಟುಣುಛಿಚಿಟ ಖಜಜಡಿತಚಿಣುಂಟಿ ಎಟಿ ಋಟಿಜುಚಿ ಎಚಿಂಚಿಟಿಟಿಚಿಣು ೦ಟಭಚಿಂಣಜುಚಿ
- Poಟುಣುಛಿಚಿಟ ಐಜಚಿಜಜಡುಠಿ: ೦ ಓಜತಿ ಅಂಟಿಛಿಜಠಿಣಾಚಿಟ ಈಡಿಚಿಟಜತಿಂಡಿ಻ ಆಣ಻ಜ ಔಜಿಥಿಣ–೦ಟಿಟ ಔಜಟಥಿಣಟಿಂ ಉಡಿಚಿಜಣಚಿಣಜ ಗಟಿತಜಡುಣಥಿ, ಖಜಂಣಟ, ಏಂಡಿಜ
- Poಟುಣುಛಿಚಿಟ ಖಜಜಡಿತಚಿಣುಂಟಿ ಚಿಟಿಜ ಖಣಡಿಚಿಟ ಕಣಭಟುಛಿ ಉಂಂಜ ಕಡಿಂತುಂಟಿ ಎಟಿ ಋಟಿಜುಚಿ ಓಚಿಟಿಜುಟಿ ಏಡುಟಿಚಿಟಿಥಿ ೦ಥಣಂಟಿ ಗಟಿತಜಡುಣಥಿ ಔಛಿಣಂಭಜಡಿ ೨೦೦೭
- ಖಿಜ ಅಛಿಣಜ ಖಥಿಣಜಟ ಋಟಿ ಋಟಿಜುಚಿಟಿ ಕಂಟುಣುಛಿ ಆಔಖ ಎಟಿ ಕಂಟಂಣುಛಿಚಿಟ ಖಛಿಜಟಿಛಿಜ, ಖಚಿಘುಟಿಜಡಿಚಿ ೦ಷಚಿಡಿಚಿಣು ಗಟಿತಜಡುಣಥಿ
- ಉಒ಻ ಖ಻ಆಋಖಖಿಖಋ೦ಃಗಖಿಋಗಿ಻ ಇಈಈ಻ಅಖಿಖ ಔಈ ಕಔಐಋಖಿಋಅಂಐ ಖ಻ಖ಻ಖಗಿಂಖಿಋಔಓ ಈಔಖ ಒಋಓಔಖಋಖಿಋ಻ಖ: ಇಗಿಋಆ಻ಓಅ಻ ಈಖಔಒ ಋಓಆಋ೦ ೦ಯಟಜಜ ಅುಟಿ ಓುಣು ಕಡಿಚಿ಻ಚು ಘಂಡಿ಻ಾಟಿಂ ಕಚಿಠಿಜಡಿ ೧೬೫೦೯ ಻ಣಣಠಿ://ತಿತಿತಿ.ಟಿಭಜಡಿ.ಂಡಿಂ/ಠಿಚಿಠಿಜಡಿ/ತಿ೧೬೫೦೯ ಒಂಖಿಋಔಒಂಐ ೦ಃಗಖ಻ಂಗ ಔಈ ಇಅಔಓಔಒಋಅ ಖ಻ಖ಻ಂಖಅಉ ೧೦೫೦ ಒಚಿಚಿಛಿಣಜಣಣ ೦ತಜಟಿಣಜ ಅಚಿಟಭಡುಜಂಜ, ಒಂ ೦೨೧೩೮ ಔಛಿಣಂಭಜಡಿ ೨೦೧೦

 Copyright @ 2025 Author